

# ಬಂಗಾರಕ್ಕೆ ಮೆರುಗು ಕೊಡುವ ಅಂಟುವಾಳ

ಚಿತ್ರ-ಬರಹ:
ಗೀತಸದಾ ಮೋಂತಿಮಾರು



‘ಸಪಿಂಡೇಸಿ’ ಸಸ್ಯಕುಟುಂಬಕ್ಕೆ ಸೇರಿದ ಅಂಟುವಾಳವನ್ನು ಸಂಸ್ಕೃತದಲ್ಲಿ ‘ಅರಿಷ್ಟಕ’ ಹಾಗೂ ಹಿಂದಿಯಲ್ಲಿ ‘ಅರೀರ’ ಎನ್ನುತ್ತಾರೆ. ಆಂಗ್ಲಭಾಷೆಯಲ್ಲಿ ‘ಸೋಪ್‌ನೆಟ್ ಟ್ರೀ’ ಎನ್ನುವ ಇದಕ್ಕೆ ಸ್ಥಳೀಯವಾಗಿ ನೊರೆಕಾಯಿ, ನರುವೊಳು ಇತ್ಯಾದಿ ಹೆಸರಿದೆ. ಹೆಸರೇ ಸೂಚಿಸುವಂತೆ ಜಜ್ಜಿ ನೀರಿನಲ್ಲಿ ನೆನೆಸಿದಾಗ ಬಹಳ ನೊರೆ ಬರುವ ಇದು ಮಾರ್ಜಕ ವಸ್ತುಗಳಲ್ಲಿ ಪ್ರಮುಖ ಸ್ಥಾನ ಪಡೆದಿದೆ.

ಚಿನ್ನ ಬೆಳ್ಳಿಯನ್ನು ಶುಭ್ರಗೊಳಿಸಿ ಅದ್ಭುತ ಮೆರುಗನ್ನು ಕೊಡುವ ಪ್ರಕೃತಿದತ್ತ ಗುಣವನ್ನು ಹೊಂದಿರುವ ಈ ನೊರೆಕಾಯಿಯನ್ನು ಅಕ್ಕಸಾಲಿಗರು ಸದಾ ತಮ್ಮ ಬಳಿ ಇಟ್ಟುಕೊಂಡಿರುತ್ತಾರೆ. ಇದರಲ್ಲಿ ಅಡಕವಾಗಿರುವ ‘ಸಪೋನಿನ್’ ಎಂಬ ರಾಸಾಯನಿಕ ವಸ್ತು ನೊರೆ ಬರಿಸುವ ಮತ್ತು ಶುಭ್ರಗೊಳಿಸುವ ಗುಣವನ್ನು ಹೊಂದಿದ್ದು ಸಾಬೂನುಗಳ ತಯಾರಿಕೆಯಲ್ಲಿ ಇದನ್ನು ಪ್ರಮುಖವಾಗಿ ಬಳಸುತ್ತಾರೆ. ಸಾಬೂನಿನ ಅವಿಷ್ಕಾರವಾಗುವ ಮೊದಲು ನಮ್ಮ ಹಿರಿಯರು ಇದನ್ನು ಸ್ನಾನ ಮಾಡಲು, ಪಾತ್ರೆ ತೊಳೆಯಲು, ಬಟ್ಟೆ ಒಗೆಯಲು, ಆಭರಣಗಳನ್ನು ಶುಭ್ರಗೊಳಿಸಲು ಬಳಸುತ್ತಿದ್ದರು.

ಪಶ್ಚಿಮ ಘಟ್ಟದ ಕಾಡುಗಳಲ್ಲಿ ಹೇರಳವಾಗಿ ಕಂಡು ಬರುವ ಈ ಅಂಟುವಾಳದ ಮರಗಳು ಬೀಜದಿಂದ ಸಸ್ಯಾಭಿವೃದ್ಧಿ ಹೊಂದುತ್ತದೆ. ಸಾಮಾನ್ಯವಾಗಿ ಅಕ್ಟೋಬರ್– ನವೆಂಬರ್‌ನಲ್ಲಿ ಹೂವು ಬಿಡಲು ಪ್ರಾರಂಭವಾಗುವ ಈ ಮರಗಳಲ್ಲಿ ನಸು ಹಸಿರು ಮಿಶ್ರಿತ ಬಂಗಾರ ಬಣ್ಣದ ಬೆಳೆದ ಕಾಯಿಗಳು ಗೊಂಚಲುಗಳಲ್ಲಿ ತುಂಬಿದಾಗ ಬಹಳ ಸುಂದರವಾಗಿ ಕಾಣುತ್ತದೆ. ವಿಶಿಷ್ಟ ಸುವಾಸನೆಯಿಂದ ಕೂಡಿರುವ ಇದರ ಹೂವಿನ ಮಕರಂದ ಜೇನುನೊಣಗಳಿಗಂತೂ ಬಹಳ ಪ್ರಿಯ. ಈ ಹೂವಿನ ಮಕರಂದದಿಂದ ತಯಾರಾದ ಜೇನುತುಪ್ಪ ಬಹಳ ರುಚಿ ಮತ್ತು ಆಕರ್ಷಕ ಬಣ್ಣದಿಂದ ಕೂಡಿರುತ್ತದೆ.

ಅಂಟುವಾಳದ ಬಲಿತ ಕಾಯಿಗಳನ್ನು ಬಿಸಿಲಿನಲ್ಲಿ ಚೆನ್ನಾಗಿ ಒಣಗಿಸಿ ಪುಡಿ ಮಾಡಿಟ್ಟುಕೊಂಡು ಹಲವು ರೀತಿಯಲ್ಲಿ ಉಪಯೋಗಿಸಬಹುದು. ಇದರ ಪುಡಿಯನ್ನು ಹಾಕಿದ ನೀರಿನಲ್ಲಿ ಆಭರಣಗಳನ್ನು ನೆನೆಸಿಟ್ಟು ತೊಳೆದರೆ ಸಾಕಷ್ಟು ಮೆರುಗನ್ನು ಪಡೆಯುತ್ತದೆ. ಹಾಗೆಯೇ ಅನ್ನ ಬಸಿದ ಗಂಜಿನೀರಿಗೆ ನೊರೆಕಾಯಿ ಪುಡಿ ಸೇರಿಸಿ ನೆನೆಸಿಟ್ಟು ಒಗೆದ ಬಟ್ಟೆಗಳು ಶುಭ್ರವಾಗುವುದರ ಜೊತೆಗೆ ಸುವಾಸನಾಭರಿತವೂ ಆಗಿರುತ್ತದೆ. ದಾಸವಾಳದ ಲೋಳೆಯ ಜೊತೆ ಇದರ ಪುಡಿ ಸೇರಿಸಿ ಸ್ನಾನ ಮಾಡುವುದರಿಂದ ತಲೆಕೂದಲು ಸೊಂಪಾಗಿ, ಕಪ್ಪಾಗಿ ಬೆಳೆಯುವುದಲ್ಲದೆ ಹೊಟ್ಟಿನ ಸಮಸ್ಯೆಯೂ ಪರಿಹಾರವಾಗುತ್ತದೆ. ಇದರ ಪುಡಿ ಉಪಯೋಗಿಸಿ ಶುಭ್ರಗೊಳಿಸಿದ ರೇಶ್ಮೆಬಟ್ಟೆಗಳು ಹುಳ ಹೊಡೆಯದೆ ಬಹಳ ಕಾಲ ಬಾಳಿಕೆ ಬರುತ್ತದೆ.

ನೊರೆಕಾಯಿ ಮತ್ತು ಅದರ ಒಳಗಿನ ಬೀಜಗಳು ಹಲವಾರು ಔಷಧೀಯ ಗುಣಗಳಿಂದ ಕೂಡಿದ್ದು ಉಬ್ಬಸ, ಅಜೀರ್ಣ ಮತ್ತು ಗಾಯಗಳ ತೊಂದರೆಗಳಿಗೆ ಔಷಧಿಯಾಗಿ ಬಳಕೆಯಾಗುತ್ತಿದೆ. ಅಂಟುವಾಳದ ಸಸ್ಯವನ್ನು ಹಿತ್ತಲಲ್ಲಿ, ಗುಡ್ಡಗಳಲ್ಲಿ, ತೋಟದ ಬದಿಯಲ್ಲಿ ನೆಟ್ಟು ಬೆಳೆಸಿ ಮೂರು ವರ್ಷಗಳಲ್ಲೇ ಫಲ ಪಡೆಯಬಹುದು. ಮಾರುಕಟ್ಟೆಯಲ್ಲೂ ಉತ್ತಮ ಬೇಡಿಕೆ ಹಾಗೂ ಧಾರಣೆಯಿದೆ.